ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ
Mahatma Gandhi Institute of Rural Energy & Development
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ
ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು – 560 064
Rural Development & Panchayat Raj Department, Government of Karnataka
Srirampura Cross, Jakkur, Bengaluru - 560 064
Phone / Fax : [illegible] e-Mail : mgiredbir@gmail.com / mgiredbir@hotmail.com / edmgired@gmail.com Website : www.mgired.karnataka.gov.in

ಸಂ:ಎಂಜಿಐ/ನಿವಹ/35/2023–24 ದಿನಾಂಕ: 28/12/2023

## ಸಂಸ್ಥೆಯಲ್ಲಿರುವ ನಿರುಪಯುಕ್ತ ವಸ್ತುಗಳ ಬಹಿರಂಗ ಹರಾಜು ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಆವರಣದಲ್ಲಿ ನಿರುಪಯುಕ್ತವಾಗಿರುವ ಸಾಮಾಗ್ರಿಗಳನ್ನು ಮರುಬಳಕೆಗೆ ಯೋಗ್ಯವಿಲ್ಲವೆಂದು ಹಾಗೂ ದುರಸ್ತಿಪಡಿಸಲು ಸಹ ಸಾಧ್ಯವಿಲ್ಲವೆಂದು ಬಹಿರಂಗ ಹರಾಜು ಮಾಡಲಾಗುತ್ತಿದೆ. ಈ ಕೆಳಗಿನ ಸಾಮಾಗ್ರಿಗಳು "ಎಲ್ಲಿವೆಯೋ ಮತ್ತು ಯಾವ ಸ್ಥಿತಿಯಲ್ಲಿವೆಯೋ ಹಾಗೆಯೆ" ದಿನಾಂಕ 10.01.2024 ರಂದು ಮಧ್ಯಾಹ್ನ 12.00 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು ಅಥವಾ ಅಧಿಕೃತ ಅಧಿಕಾರಿಗಳಿಂದ ಈ ಕೆಳಗಿನ ಷರತ್ತುಗಳಿಗೊಳಪಟ್ಟಂತೆ ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುವುದು. ಆಸಕ್ತಿ ಉಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿ ಪ್ರಕಟಿಸಲಾಗಿದೆ.

| | |
|---|---|
| **ಟೆಂಡರು/ ಹರಾಜು ನಡೆಯುವ ಸ್ಥಳ** | **ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು** |
| **ಬಹಿರಂಗ ಹರಾಜು ದಿನ ಮತ್ತು ಸಮಯ** | **10.01.2024 ಮಧ್ಯಾಹ್ನ 12.00** |

**<u>ಅನುಬಂಧ–1</u>**

**ಹರಾಜಿಗೆ ಪ್ರಸ್ತಾಪಿಸಿದ ವಸ್ತುಗಳ ವಿವರಗಳು**

| ಕ್ರ ಸಂ | ಸಾಮಾಗ್ರಿ ವಿಧ | ನಿರುಪಯುಕ್ತ ವಸ್ತುಗಳು ಇರುವ ಸ್ಥಳ | ಇಎಂಡಿ ಮೊತ್ತ |
|---|---|---|---|
| 1 | ಕಬ್ಬಿಣದ ಸಾಮಾಗ್ರಿಗಳು / ಮತ್ತು ಹಳೆಯ ಕಬ್ಬಿಣದ ಕುಷನ್ ಛೇರ್ಸ್ | ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಅಭಿವೃದ್ಧಿ ಸಂಸ್ಥೆ, ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು | 5000/– |
| 2 | ಅಲ್ಯುಮೀನಿಯಂ ಸಾಮಾಗ್ರಿಗಳು ಪ್ಲಾಸ್ಟಿಕ್ ಸಾಮಾಗ್ರಿಗಳು | | 5000/– |
| 3 | ಇ–ವೇಸ್ಟ್<br>ಸೋಲಾರ್ ಬ್ಯಾಟರಿಗಳು<br>ಹಳೆಯ ಮಾನಿಟರ್ ಗಳು | | 2000/– |
| 4 | **ಇತರೆ ಸಾಮಾಗ್ರಿಗಳು**<br>ಹಳೆಯ ಸಿಂಗಲ್ ಬೆಡ್‌ಗಳು,<br>ಹರಿದುಹೋದ ದಿಂಬುಗಳು,<br>ಹಳೆಯ ಬೆಡ್‌ಶೀಟ್ಸ್<br>ಮರದ ತುಂಡುಗಳು | | 2000/– |

**<u>ಷರತ್ತುಗಳು</u>**

1. ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಅವರ ವಿಳಾಸವನ್ನು ಖಾತ್ರಿ ಪಡಿಸುವ ಸಲುವಾಗಿ ಚುನಾವಣಾ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಪ್ರತಿಯನ್ನು ಹಾಜರುಪಡಿಸತಕ್ಕದ್ದು
2. ಹರಾಜಿಗೆ ಪ್ರಸ್ತಾಪಿಸಿರುವ ವಸ್ತುಗಳು "ಎಲ್ಲಿದೆಯೋ ಮತ್ತು ಯಾವ ಸ್ಥಿತಿಯಲ್ಲಿದೆಯೋ ಹಾಗೆಯೆ" ಹರಾಜು ಮಾಡಲಾಗುವುದು. ಸದರಿ ವಸ್ತುಗಳನ್ನು ಖರೀದಿಸಲು ಆಸಕ್ತಿ ಹೊಂದಿರುವವರು ದಿನಾಂಕ: 09.01.2024 ರೊಳಗಾಗಿ ಕಚೇರಿಗೆ ಭೇಟಿ ನೀಡಿ ವಸ್ತುಗಳನ್ನು ಸಂಸ್ಥೆಯ ಆವರಣದೊಳಗೆ ಮಾತ್ರ ಪರಿವೀಕ್ಷಿಸಬಹುದು.

3. ಹರಾಜು ನಡೆಸುವ ವಸ್ತುಗಳನ್ನು ಸ್ಥಿತಿಗತಿಗಳ ಬಗ್ಗೆ ಅವುಗಳಿರುವ ಸ್ಥಳದಲ್ಲಿ ಹರಾಜಿಗಿಂತ ಮೊದಲೆ ಸವಾಲುದಾರರು ಪರಿಶೀಲಿಸಿಕೊಳ್ಳತಕ್ಕದ್ದು. ಹರಾಜಿನ ನಂತರ ವಸ್ತುಗಳನ್ನು ಗುಣಮಟ್ಟ ಹಾಗೂ ಸ್ಥಿತಿಗತಿಯ ಬಗ್ಗೆ ಬರುವ ಯಾವುದೇ ಆಹವಾಲುಗಳನ್ನು ಪರಿಗಣಿಸಲಾಗುವುದಿಲ್ಲ.
4. ಬಹಿರಂಗ ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಅನುಬಂಧ – 1 ರಲ್ಲಿ ತಿಳಿಸಿರುವ ಮೊತ್ತವನ್ನು ಇ.ಎಂ.ಡಿ. ಮೊತ್ತವನ್ನಾಗಿ ಹರಾಜಿಗೆ ಮೊದಲು ನಗದಾಗಿ ಪಾವತಿಸತಕ್ಕದ್ದು.
5. ಬಹಿರಂಗ ಹರಾಜಿನಲ್ಲಿ ಅತಿ ಹೆಚ್ಚಿನ ಮೊತ್ತದ ಬಿಡ್ಡನ್ನು ಪರಿಗಣಿಸಲಾಗುವುದು.
6. ಹರಾಜು ನಡೆಸುವ ಅಧಿಕಾರಿಯು ಹರಾಜಿನ ದಿನಾಂಕ ಮತ್ತು ವೇಳೆಯನ್ನು ಮುಂದೂಡುವ ಅಥವಾ ರದ್ದು ಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.
7. ಹರಾಜಿನಲ್ಲಿ ವಸ್ತುಗಳನ್ನು ಖರೀದಿಸುವ ಸವಾಲುದಾರರು ಅದೇ ದಿನ ಸವಾಲು ಮೊತ್ತದ ಶೇಕಡಾ 25ರಷ್ಟು ಮೌಲ್ಯವನ್ನು ಹಾಗೂ ಚಾಲ್ತಿಯಲ್ಲಿರುವ ತೆರಿಗೆಗಳನ್ನು ಹರಾಜು ದಿನದಂದೇ ಪಾವತಿಸತಕ್ಕದ್ದು, ತಪ್ಪಿದ್ದಲ್ಲಿ ಸವಾಲುದಾರರು ಪಾವತಿಸಿರುವ ಇ.ಎಂ.ಡಿ. ಹಣವನ್ನು ಸಂಸ್ಥೆಯು ಮುಟ್ಟುಗೋಲು ಹಾಕಿಕೊಂಡು ವಸ್ತುಗಳನ್ನು ಅವರ ವೈಯಕ್ತಿಕ ಜವಾಬ್ದಾರಿಯ ಮೇಲೆ ಮರು ಹರಾಜು ಮಾಡಲಾಗುವುದು. ಇದರಿಂದ ಸಂಸ್ಥೆಗೆ ನಷ್ಟ ಸಂಭವಿಸಿದಲ್ಲಿ ಅದನ್ನು ಬಿಡ್ಡುದಾರರಿಂದ ಕಾನೂನು ಪ್ರಕಾರ ವಸೂಲು ಮಾಡಲಾಗುವುದು. ಇಂತಹ ಸಂದರ್ಭಗಳಲ್ಲಿ ಸಂಸ್ಥೆಗೆ ಆಗುವ ನಷ್ಟವೆಂದು ಪರಿಗಣಿಸಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುವುದು. ಆದರೆ ಮರು ಹರಾಜಿನಿಂದ ಸಂಸ್ಥೆಗೆ ಹೆಚ್ಚಿನ ಮೊತ್ತ ಬಂದಲ್ಲಿ ಅದರ ಲಾಭಾಂಶವನ್ನು ಪಡೆಯಲು ಸವಾಲುದಾರರು ಅರ್ಹರಾಗುವುದಿಲ್ಲ.
8. ಹರಾಜಿಗೆ ಸಂಬಂಧಿಸಿದ ಸ್ಥಿರೀಕರಣ ಆದೇಶವು ಸ್ವೀಕೃತವಾದ ದಿನದಂದೆ ಅಥವಾ ದಿನಾಂಕ 12.01.2024 ರೊಳಗಾಗಿ ಖರೀದಿದಾರರು ಬಾಕಿ ಇರುವ ಶೇಕಡಾ 75ರಷ್ಟು ಮೊತ್ತವನ್ನು (ಜಿಎಸ್‌ಟಿ/ಚಾಲ್ತಿಯಲ್ಲಿರು ತೆರಿಗೆಗಳು ಸೇರಿ) ಪಾವತಿಸಿ ವಸ್ತುಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳತಕ್ಕದ್ದು. ಬಿಡ್ಡುದಾರರು ವಸ್ತುಗಳನ್ನು ನಿಗದಿಪಡಿಸಿದ ಅವಧಿಯಲ್ಲಿ ತೆಗೆದುಕೊಂಡು ಹೋಗದಿದ್ದ ಪಕ್ಷದಲ್ಲಿ ಕಳ್ಳತನ, ಬೆಂಕಿ ಹಾಗೂ ಇತರ ಯಾವುದೇ ನಷ್ಟಗಳಿಗೆ ಸಂಸ್ಥೆಯು ಜವಾಬ್ದಾರರಾಗುವುದಿಲ್ಲ.
9. ನಿರುಪಯುಕ್ತ ವಸ್ತುಗಳ ಹರಾಜು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ., ಬೆಂಗಳೂರು ಇವರಿಗಿದ್ದು ಈ ಬಗ್ಗೆ ಸಂಸ್ಥೆಯ ತೀರ್ಮಾನವೇ ಅಂತಿಮವಾಗಿರುತ್ತದೆ.
10. ಹರಾಜು ಸ್ವೀಕೃತಿಯಾಗದ ಇತರ ಸವಾಲುದಾರರ ಠೇವಣಿಯನ್ನು ಹರಾಜು ಮುಕ್ತಾಯವಾದ ಕೂಡಲೇ ಹಿಂದಿರುಗಿಸಲಾಗುವುದು.
11. ಹೆಚ್ಚಿನ ಮಾಹಿತಿಗಳು ಬೇಕಿದಲ್ಲಿ ಈ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಖುದ್ದಾಗಿ ಭೇಟಿನೀಡಿ/ದೂರವಾಣಿ ಮೂಲಕ 080–23626359 ಅಥವಾ 080–23626493 ಗೆ ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿದೆ.

Manoj Kumar

ಕಾರ್ಯನಿರ್ವಾಹಕ ನಿರ್ದೇಶಕರು,
ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ
ಬೆಂಗಳೂರು

ಇವರಿಗೆ,
ಎಲ್ಲಾ ಸಾರ್ವಜನಿಕರಿಗೆ ಹಾಗೂ ನಿರುಪಯುಕ್ತ ವಸ್ತುಗಳ ಖರೀದಿದಾರರುಗಳಿಗೆ
ಪ್ರತಿಯನ್ನು:
1) ಪ್ರಕಟಣಾ ಫಲಕಕ್ಕೆ – ಪ್ರಚಾರಕ್ಕಾಗಿ
2) ಸಹಾಯಕ ನಿರ್ದೇಶಕರು
3) ಲೆಕ್ಕ ಸಹಾಯಕರು